ಹೇಗೂ ಕೈತುಂಬಾ ಕೆಲಸವೂ ಇಲ್ಲದ ಕಾರಣ ಇದೊಂದು ಚಂದ ನೋಡಿಬಿಡುವ ಹುಕಿ ಅವರಿಗೂ ಬಂದಿತ್ತು. ಅವರ ಮನೆಯನ್ನು ಮತ್ತು ಸುತ್ತಮುತ್ತಲ ಜಾಗವನ್ನೆಲ್ಲಾ 'ಹೋಂ ಸ್ಟೇ' ಮಾಡಲು ಬೇಕಾದಂತೆ ವ್ಯವಸ್ಥೆ ಮಾಡಿಸತೊಡಗಿದ್ದರು. ಸಮಸ್ಯೆ ಆರಂಭವಾಗಿದ್ದೇ ಇಲ್ಲಿ.

ಮಾರ್ಬಲ ರಾಯರ ಮನೆಗೆ ತಾಗಿದಂತೆಯೆ ಗಂಗಾಭವಾನಿಯದು ಸ್ವಲ್ಪ ಜಾಗವಿದ್ದು, ಆವರೆಗೂ ಈ ಎರಡೂ ಮನೆಗಳ ನಡುವೆ ಸ್ಪಷ್ಟವಾದ ಬೇಲಿಯೇನೂ ಇರಲಿಲ್ಲ. ಎರಡೂ ಕುಟುಂಬಗಳು ನಗುತ್ತಲೇ ದಿನ ಕಳೆಯುತ್ತಿದ್ದರಿಂದ ಗಡಿ ಕಾಯುವ ಅಗತ್ಯವೆಂದೂ ಬಂದಿರಲಿಲ್ಲವೆನ್ನಿ. ಈಗೊಂದು ಕಾಂಪೌಂಡು ಹಾಕಿಸುವ ಉದ್ದೇಶದಿಂದ ತಮ್ಮ ಗಡಿ ಸರ್ವೇ ಮಾಡಿಸಿದ್ದರು ಮಾರ್ಬಲ ರಾಯರು. ಈಗ ಗಂಗಕ್ಕ ಗೊಬ್ಬರ ಗುಂಡಿಯಾಗಿ ಉಪಯೋಗಿಸುತ್ತಿರುವ ಜಾಗ ರಾಯರ ಕಾಂಪೌಂಡಿನೊಳಗೆ ಬರುತ್ತಿತ್ತು. ಆದರೆ ಜಾಗ ಗಂಗಕ್ಕನದೇ ಆಗಿತ್ತು. ಕೃಷಿ ಕುಟುಂಬವೊಂದರಿಂದ ಭರಿಸಬೇಕಾದ ಹಲವು ರೀತಿಯ ತ್ಯಾಜ್ಯಗಳನ್ನು ಈ ಗೊಬ್ಬರಗುಂಡಿ ಭರಿಸುತ್ತಿತ್ತು. ಮೂಲತಃ ಗಂಗಕ್ಕನ 30 ಗುಂಟೆ ತೋಟಕ್ಕೆ, ಉಳಿದ ಹಿತ್ತಲುಗಳಿಗೆ ಬೇಕಾದಷ್ಟು ಗೊಬ್ಬರವನ್ನು ಈ ಗುಂಡಿ ನಿಷ್ಠೆಯಿಂದ ಒದಗಿಸುತ್ತಿತ್ತು. ಆದರೆ ಅಮೃತಶಿಲೆಯ ರಾಯರಿಗೆ ಗೊಬ್ಬರಗುಂಡಿಯಾದರೂ ಹೇಗೆ ಪ್ರಿಯವಾದೀತು? ಅವರ ತ್ಯಾಜ್ಯಗಳೆಲ್ಲಾ ತೋಟದಲ್ಲೇ ಗೊಬ್ಬರವಾಗುತ್ತಿದ್ದರಿಂದ ನೆರೆಮನೆಯ ತ್ಯಾಜ್ಯ ಈಗ ತೊಡಕಾಗಿತ್ತು. ಬರುವ ನಗರದ ಅತಿಥಿಗಳಿಗೆ ಮನೆ ಪಕ್ಕದಲ್ಲಿ ನಾತ ಬೀರುವ ಗೊಬ್ಬರಗುಂಡಿಯಿದ್ದರೆ ಮೆಚ್ಚುಗೆಯಾದೀತೆ? ಅದೂ ಅಲ್ಲದೆ, ಆ ಗೊಬ್ಬರಗುಂಡಿಯನ್ನು ಮುಚ್ಚಿಸಿ, ಜಾಗ ಸಮತಟ್ಟು ಮಾಡಿಸಿಕೊಂಡರೆ ಅತಿಥಿಗಳ ಕಾರು ನಿಲ್ಲಿಸಲು ಲಾಯಕ್ಕಾದೀತು ಎಂದು ಅವರು ಹವಣಿಸಿಕೊಂಡಿದ್ದರು. ಎಲ್ಲಾ ಆಗುತ್ತಿತ್ತೇನೋ ಗಂಗಕ್ಕ ಒಪ್ಪಿದ್ದಿದ್ದರೆ!

"ಮನೆಯ ಸುತ್ತಿನ ಅಂಗೈಯಗಲ ಜಾಗ ಬಿಟ್ಕೊಡಿ ಅಂದ್ರೆ ಹೆಂಗೆ ಮಾಬ್ಲಣ್ಣ? ಆ ಗೊಬ್ಬರಗುಂಡಿ ಅಲ್ಲಿಂದ ತೆಗೆದ್ರೆ ಬೇರೆ ಜಾಗಿಲ್ಲೆ ಯಂಗೆ. ಇಪ್ಪದೊಂದು ಸಣ್ಣ ಅಂಗಳ. ಹುಡುಗ್ರು ಆಡದ್ರಿಂದ ಹಿಡಿದು, ಹಪ್ಪಳ, ಸಂಡಿಗೆ ಒಣಗಿಸಲ್ಲೂ ಅದೇ ಜಾಗವೇ. ಗೊಬ್ಬರಗುಂಡಿ ಅಲ್ಲಿಂದ ತೆಗೆಯಲ್ಲೆ ಸಾಧ್ಯಿಲ್ಲೆ" ಎಂದು ಗಂಗಕ್ಕ ಕಡ್ಡಿ ಮುರಿದಂತೆ ಹೇಳಿದ್ದಳು.

"ಇಲ್ಲೇ ಮುಂದೆ ನಿಂಗಳ ತ್ವಾಟದ್ದಲೇ. ಅಲ್ಲಿ ಮಾಡಿ ಗೊಬ್ಬರಗುಂಡೀನ. ಅಲ್ಲೇ ಗೊಬ್ಬರ ತೆಗೆದ್ರಾತು ಹಾಕಿದ್ರಾತು. ಇಲ್ಲಾದ್ರೆ ನಿಂಗೇ ಕಷ್ಟ. ಅದೂ ಅಲ್ದೆ ಆ ಗೊಬ್ಬರ ಸುರಿಯ ಕೊಳಕು ಜಾಗಕ್ಕೆ ನೀ ಕೇಳಿದ್ ಬೆಲೆ ಕೊಡ್ತಿ. ಯೋಚ್ನೆ ಮಾಡು" ಎಂದು ರಾಯರು ಆಕೆಯನ್ನು ಸಾಕಷ್ಟು ಪುಸಲಾಯಿಸಿದ್ದರು.

ಊಹುಂ, ಗಂಗಕ್ಕ ಒಪ್ಪಲಿಲ್ಲ. ಒಂದು ಫರ್ಲಾಂಗು ದೂರದ ತೋಟದಲ್ಲಿ ಗೊಬ್ಬರಗುಂಡಿ ಸಾಗಿಸಿದರೆ, ದಿನದ ಕಸವನ್ನು ಅದಕ್ಕೆ ಹೊತ್ತುಕೊಂಡು ಹೋಗಿ ಸುರಿಯುವವರು ಯಾರು? ಇಲ್ಲಾದರೆ ದಿನೋಪಯೋಗದ ಊಟದ ಬಾಳೆಯಿಂದ ಹಿಡಿದು, ಕೊಟ್ಟಿಗೆ ತೊಳೆದ ನೀರಿನವರೆಗೆ ಪ್ರತಿಯೊಂದೊಂದೂ ನಿಶ್ಚಿಂತೆಯಿಂದ ಗೊಬ್ಬರವಾಗುತ್ತಿದ್ದವು. ರಾಯರು ತಾವು ಹೇಳಿದ್ದಲ್ಲದೆ, ಊರಿನ ಕೆಲವರಿಂದ ಹೇಳಿಸಿದರು. ರಾಯಭಾರಕ್ಕೆ ತಮ್ಮ ಪತ್ನಿಯನ್ನೂ ಕಳಿಸಿ ನೋಡಿದರು. ಅವರ ಮನೆಯಿಂದ ಮರಳಿ ಬಂದ ಕುಸುಮಕ್ಕ, "ಪಾಪದ್ದು ಗಂಗಕ್ಕ! ಎಷ್ಟೆಲ್ಲಾ ಕಟಪಟೆ ಮಾಡ್ತು ದಿನ ಕಳಿಯಲ್ಲೆ. ಆನು ಕಂಡಾಗಿಂದ್ಲೂ ಅದ್ರದ್ದು ಮುಗಿಯದ ಒದ್ದಾಟ. ಈಗ ಅದ್ರ ಜಾಗ ನಾವು ತಗಂಡ್ರೆ, 'ಹೆಕ್ಯಂಡು ತಿನ್ನ ಕೋಳಿ ಕಾಲು ಮುರ್ದ' ಹೇಳಿ ಊರೆಲ್ಲಾ ಮಾತಾಡ್ತ. ಕಾರು ನಿಲ್ಸ ಜಾಗ ಬ್ಯಾರೆ ಮಾಡ್ಸಿ. ಇದನ್ನ ಬಿಟ್ಹಾಕಿ ಅತ್ಲಾಗೆ" ಎಂದು ಗಂಡನಿಗೇ ಉಪದೇಶ ನೀಡಿ, ಅವರ ಬಿಪಿ ಏರಿಸಿದ್ದಳು.

★★★

ಬರೀ ಕಾರು ನಿಲ್ಲಿಸುವ ವಿಷಯವಾಗಿದ್ದರೆ ಇಷ್ಟೆಲ್ಲಾ ಒದ್ದಾಡುವ ಪ್ರಮೇಯ ಇರಲಿಲ್ಲ. ಮೊದಲಿನಿಂದಲೂ ಅಮೃತಶಿಲೆಯ ಮೋಹಕ್ಕೆ ಬಿದ್ದಿದ್ದ ಮಾರ್ಬಲ ರಾಯರಿಗೆ ಬಿಳಿ, ಸ್ವಚ್ಛವಲ್ಲದ್ದು